ಕರ್ನಾಟಕ ವಿಧಾನ ಸಭೆ

ಬುಧವಾರ 23 ನೇ ಮಾರ್ಚಿ 1983, ಚೈತ್ರ 2, 1905

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು 11-00 ಗಂಟೆಗೆ ಸಮಾವೇಶ ಗೊಂಡಿತು.

[ಉಪಾಧ್ಯಕ್ಷರು (ಶ್ರೀ ವೀರಣ್ಣ ಆವರು ಪೀಠವನ್ನು ಅಲಂಕರಿಸಿದರು.)

OATH BY A MEMBER

Sri. J. A. Farnandes (Nominated) took the oath and signed the rolls.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿಮಾತಿನ ಉತ್ತರಗಳು

ರಾಜ್ಯದಲ್ಲಿರುವ ಜೂನಿಯರ್ ಕಾಲೇಜುಗಳಲ್ಲಿ ಖಾಲಿಯಿರುವ ಪ್ರಾಚಾರ್ಯರುಗಳ ಹುದ್ದೆಗಳು

110 ಡಾ॥ ಹೆಗ್ಗಪ್ಪ ಲಮಾಣಿ(ಬ್ಯಾಡಗಿ).—ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ:--

ಅ) ರಾಜ್ಯದಲ್ಲಿರುವ ಅನೇಕ ಜೂನಿಯರ್ ಕಾಲೇಜುಗಳಲ್ಲಿ ಪ್ರಾಚಾರ್ಯರುಗಳ ಹುದ್ದೆಗಳು ಖಾಲಿಯಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಅವುಗಳನ್ನು ಯಾವಾಗ ತುಂಬಬಹುದು ;

ಇ) ರಾಜ್ಯದಲ್ಲಿ ತಾಲ್ಲೂಕು ಶಿಕ್ಷಣಾಧಿಕಾರಿಗಳ (ಎ. ಇ. ಓ.) ಹುದ್ದೆಗಳು ಎಷ್ಟು ಖಾಲಿ ಇವೆ ?

ಶ್ರೀ ಬಿ. ರಾಚಯ್ಯ (ವಿದ್ಯಾಮಂತ್ರಿಗಳು).—ಆ, ಹೌದು.

ಆ) ಹಿರಿಯ ಉಪನ್ಯಾಸಕರುಗಳಿಗೆ ಬಡ್ತಿ ನೀಡಿ ಪ್ರಾಚಾರ್ಯರ ಹುದ್ದೆಗಳನ್ನು ಭರ್ತಿ ಮಾಡುವು ದೆಂದು ನಿರ್ಧರಿಸಲಾಗಿದೆ. ಇದಕ್ಕೆ ಬೇಕಾದ ಕೇಡರ್ ಮತ್ತು ನೇಮಕಾತಿನಿಯಮ ತಿದ್ದು ಪಡಿ ಯಾದ ಕೂಡಲೇ ಹುದ್ದೆಗಳನ್ನು ಭರ್ತಿಗೊಳಿಸಲಾಗುವುದು.

ಇ) 8 (ಎ. ಇ ಓ.)

ಡಾ॥ ಹೆಗ್ಗಪ್ಪ ಲಮಾಣಿ.—ಸ್ವಾಮಿ, ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಹೌದು ಅಂತ ಹೇಳಿದ್ದೀರಿ. ನನ್ನ ತಾಲ್ಲೂಕು ಮಟ್ಟಿಗೆ ಕೇಳುವುದಾದರೆ ನಮ್ಮ ಬ್ಯಾಡಗಿ ತಾಲ್ಲೂಕಿನಲ್ಲಿರುವ ಜೂನಿ ಯರ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಹುದ್ದೆ ಖಾಲಿ ಇರುವುದರಿಂದ ಅದನ್ನು ಮುಂದಿನ ಅಕಾಡೆಮಿಕ್ ವರ್ಷ ದಲ್ಲಾದರೂ ತುಂಬುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ.--ಮುಂದಿನ ಅಕಾಡೆಮಿಕ್ ವರ್ಷದಿಂದ ಆ ಹುದ್ದೆಯನ್ನು ಭರ್ತಿಮಾಡುವು ದಕ್ಕೆ ಸಾಧ್ಯವಾಗುತ್ತದೆ.

ಡಾ॥ ಹೆಗ್ಗಪ್ಪ ಲಮಾಣಿ.--ನನ್ನ ಪ್ರಶ್ನೆ (ಇ) ಗೆ ಉತ್ತರವಾಗಿ 8 ಎ. ಇ. ಓ. ಹುದ್ದೆಗಳು ಖಾಲಿ ಇವೆ ಅಂತ ಹೇಳಿದ್ದೀರಿ. ರಾಜ್ಯಾದ್ಯಂತ 8 ಆ ಹುದ್ದೆಗಳು ಮಾತ್ರ ಖಾಲಿ ಇವೆಯೇ ? ಅಥವಾ ಇನ್ನೂ ಜಾಸ್ತಿ ಇದೆಯೇ ? ನಮ್ಮ ಬ್ಯಾಡಗಿ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಈ ಎ. ಇ. ಓ. ಹುದ್ದೆಯನ್ನು ಎರಡು ವರ್ಷದಿಂದಲೂ ತುಂಬಿಲ್ಲ. ಆ ಹುದ್ದೆಯನ್ನು ಆದಷ್ಟು ಬೇಗ ತುಂಬಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.--ನನ್ನಲ್ಲಿರುವ ಮಾಹಿತಿ ಪ್ರಕಾರ 8 ಎ. ಇ. ಓ. ಹುದ್ದೆಗಳು ಮಾತ್ರ ಖಾಲಿ ಇವೆಯೆಂದು ತಿಳಿದು ಬಂದಿದೆ. ಆ ಪ್ರಕಾರ ನಾನು ಉತ್ತರ ಹೇಳಿದ್ದೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ --ನಮ್ಮ ತಾಲ್ಲೂಕಿನ ಸಕ್ಕರೆ ಪಟ್ಟಣದಲ್ಲಿ ಪ್ರಿನ್ಸಿಪಾಲ್ ಹುದ್ದೆ ಯನ್ನು ಇನ್ನೂ ಭರ್ತಿಮಾಡಿಲ್ಲ. ಅಲ್ಲಿ ಇರತಕ್ಕಂಥಾ ಒಬ್ಬ ಸೀನಿಯರ್ ಪ್ರಾಧ್ಯಾಪಕರನ್ನು ಇನ್‌ಚಾರ್ಜ್ ಹಾಕಿರುವುದರಿಂದ, ಅವರೇ ಆದನ್ನು ನೋಡಿಕೊಳ್ಳುತ್ತಿದ್ದಾರೆ. ಈ ಹುದ್ದೆಯನ್ನು ಎಷ್ಟು ದಿವಸ ದಲ್ಲಿ ಭರ್ತಿ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.--ಮೊದಲು ಡಿ ಡಿ ಪಿ ಐ ಹುದ್ದೆಯನ್ನು ಭರ್ತಿ ಮಾಡಿದರೆ ಆನಂತರ ಎ. ಇ. ಓ. ಹುದ್ದೆಯನ್ನು ಭರ್ತಿ ಮಾಡುವುದಕ್ಕೆ ಸಾಧ್ಯತೆ ಇದೆ. ಖಾಲಿಯಿರುವ ಒಟ್ಟು ಜೂನಿಯರ್ ಕಾಲೇಜಿನ ಪ್ರಿನ್ಸಿಪಾಲ್‌ರ ಸಂಖ್ಯೆ 146 ಇದೆ. ಮಾನ್ಯ ಸದಸ್ಯರು ಕೇಳಿರತಕ್ಕಂಥಾ ಪ್ರಶ್ನೆ ಎ. ಇ. ಓ ಪ್ರಶ್ನೆಯಾಗಿರುವುದರಿಂದ ಅದರ ಬಗ್ಗೆ ಏನು ಮಾಹಿತಿ ನನ್ನಲ್ಲಿ ಇದೆಯೋ ಅದನ್ನು ಕೊಟ್ಟಿದ್ದೇನೆ.